# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 104

ಸದಸ್ಯರ ಹೆಸರು : ಶ್ರೀ ಕೋಟ ಶ್ರೀನಿವಾಸ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವ ದಿನಾಂಕ : 09.07.2018.

ಉತ್ತರಿಸುವ ಸಚಿವರು : ಮಾನ್ಯ ಜಲಸಂಪನ್ಮೂಲ ಸಚಿವರು (ಭಾರಿ ಮತ್ತು ಮಧ್ಯಮ ನೀರಾವರಿ)

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಉಡುಪಿ ಜಿಲ್ಲೆಯ ವಾರಾಹಿ ಯೋಜನೆ ಯಾವಾಗ ಪ್ರಾರಂಭವಾಯಿತು; ಯೋಜನೆಯ ಮೂಲ ಅಂದಾಜು ಎಷ್ಟು; ಪ್ರಸಕ್ತ ಪರಿಷ್ಕೃತ ಅಂದಾಜು ಎಷ್ಟು; ಇಲ್ಲಿಯವರೆಗೆ ಖರ್ಚಾದ ಅನುದಾನವೆಷ್ಟು; | ಉಡುಪಿ ಜಿಲ್ಲೆಯ ವಾರಾಹಿ ನೀರಾವರಿ ಯೋಜನೆಯು 1979ರಲ್ಲಿ ಪ್ರಾರಂಭಗೊಂಡಿದ್ದು, ಸದರಿ ಯೋಜನೆಯ ಮೂಲ ಅಂದಾಜು ಮೊತ್ತ ರೂ.9.43ಕೋಟಿಗಳಾಗಿತ್ತು. ಯೋಜನೆಯು ಕರ್ನಾಟಕ ನೀರಾವರಿ ನಿಗಮಕ್ಕೆ 2004 ರಲ್ಲಿ ಹಸ್ತಾಂತರಗೊಂಡಿದ್ದು, 2003–04ನೇ ಸಾಲಿನ ದರಪಟ್ಟಿಯಂತೆ, ಸದರಿ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.569.53 ಕೋಟಿಗಳಾಗಿರುತ್ತದೆ. ಸದರಿ ಯೋಜನೆಯ ಮರು ಪರಿಷ್ಕೃತ ಅಂದಾಜು ಮೊತ್ತ ರೂ.1789.50 ಕೋಟಿಗಳಾಗಿದ್ದು, ಸರ್ಕಾರದಲ್ಲಿ ಪರಿಶೀಲಿಸಲಾಗುತ್ತಿದೆ. ಪ್ರಸ್ತುತ ವಾರಾಹಿ ನೀರಾವರಿ ಯೋಜನೆಯಡಿ, ಇಲ್ಲಿಯವರೆಗೆ (ಮೇ–2018ರ ಅಂತ್ಯದವರೆಗೆ) ರೂ. 760.00ಕೋಟಿ ವೆಚ್ಚವಾಗಿರುತ್ತದೆ. |
| ಆ) | ವಾರಾಹಿ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ಕಾಯ್ದಿರಿಸಿದ ಅನುದಾನವೆಷ್ಟು; ಯೋಜನೆಯನ್ನು ಯಾವಾಗ ಮುಕ್ತಾಯಗೊಳಿಸಲಾಗುವುದು; | ವಾರಾಹಿ ಯೋಜನೆಗೆ ಸಂಬಂಧಿಸಿದಂತೆ, ಇಲ್ಲಿಯವರೆಗೆ 2018–19ನೇ ಪ್ರಸಕ್ತ ಸಾಲಿನಲ್ಲಿ ದಿನಾಂಕ:16.02.2018 ರಂದು ಜರುಗಿದ ಬಜೆಟ್ ಅನ್ವಯ ರೂ.20.00 ಕೋಟಿ ಹಂಚಿಕೆಯಾಗಿರುತ್ತದೆ. ಸದರಿ ಯೋಜನೆಯನ್ನು 2021–22ನೇ ಸಾಲಿನ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. |
| ಇ) | ಉಡುಪಿ ಜಿಲ್ಲೆಯ ಯಾವ ಯಾವ ಗ್ರಾಮಗಳಿಗೆ ವಾರಾಹಿ ನೀರಾವರಿ ಯೋಜನೆಯಿಂದ ನೀರನ್ನು ಒದಗಿಸಲಾಗುತ್ತಿದೆ; ಇನ್ನು ಯಾವ ಯಾವ ಪ್ರದೇಶಗಳಿಗೆ ಸೌಲಭ್ಯ ವಿಸ್ತರಿಸುವ ಯೋಜನೆ ಹಮ್ಮಿಕೊಳ್ಳಲಾಗಿದೆ; | ವಾರಾಹಿ ನೀರಾವರಿ ಯೋಜನೆಯಡಿ ಅನುಮೋದನೆಗೊಂಡ ಮೂಲ ಯೋಜನೆಯಂತೆ, ಭಾಗಶಃ ಕಾಮಗಾರಿಗಳನ್ನು ಪೂರ್ಣಗೊಳಿಸಿ, ನೀರನ್ನು ಒದಗಿಸಿರುವ ಮತ್ತು ಒದಗಿಸಬೇಕಾದ ಗ್ರಾಮಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಲಾಗಿದೆ. ಮೂಲ ಯೋಜನೆಯಂತೆ ನೀರನ್ನು ಒದಗಿಸಲು ಕ್ರಮ ಜಾರಿಯಲ್ಲಿದ್ದು, ಯಾವುದೇ ಹೆಚ್ಚುವರಿ ಪ್ರದೇಶಗಳಿಗೆ ವಿಸ್ತರಿಸುವ ಯೋಜನೆ ಇರುವುದಿಲ್ಲ. |
| ಈ) | ವಾರಾಹಿ ನೀರಾವರಿ ಯೋಜನೆಯನ್ನು ಕಾಲಮಿತಿಯಲ್ಲಿ ಮುಕ್ತಾಯಗೊಳಿಸಲು ಸರ್ಕಾರ ಯಾವ ಕ್ರಮ ಕೈಗೊಳ್ಳಲಿದೆ. | ವಾರಾಹಿ ನೀರಾವರಿ ಯೋಜನೆಯಡಿ ಅನುಮೋದನೆಗೊಂಡ ಮೂಲ ಯೋಜನೆಯಂತೆ, ಕಾಮಗಾರಿಗಳಿಗೆ ಅಗತ್ಯವಿರುವ ಭೂಸ್ವಾಧೀನ ಪ್ರಕ್ರಿಯೆ ಶೀಘ್ರವಾಗಿ ಪೂರ್ಣಗೊಳಿಸಿ ಹಾಗೂ ಅರಣ್ಯ ಪ್ರದೇಶದ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ, ಸದರಿ ಯೋಜನೆಯನ್ನು 2021–22ನೇ ಸಾಲಿನ ಒಳಗಾಗಿ ಪೂರ್ಣಗೊಳಿಸಲು ಯೋಜಿಸಲಾಗಿದೆ. |

ಸಂಖ್ಯೆ: ಜಸಂಇ 31 ಎಂಎಲ್‌ಎ 2018

[ಡಿ.ಕೆ.ಶಿವಕುಮಾರ್]
ಜಲಸಂಪನ್ಮೂಲ ಸಚಿವರು.

# ಅನುಬಂಧ

## ವಾರಾಹಿ ನೀರಾವರಿ ಯೋಜನೆಯಡಿ ಕಾಮಗಾರಿ ಪೂರ್ಣಗೊಂಡು, ನೀರಾವರಿ ಸೌಲಭ್ಯ ಒದಗಿಸುವ ಗ್ರಾಮವಾರು ವಿವರ

| ಕ್ರ.ಸಂ. | ಕಾಮಗಾರಿ | ನೀರಾವರಿ ಸೌಲಭ್ಯ ಒದಗಿಸಿರುವ ಗ್ರಾಮಗಳ ಹೆಸರು | ನೀರಾವರಿ ಸೌಲಭ್ಯ ಒದಗಿಸಬೇಕಾಗಿರುವ ಗ್ರಾಮಗಳ ಹೆಸರು |
|---|---|---|---|
| 1 | ವಾರಾಹಿ ಎಡದಂಡೆ ಕಾಲುವೆ | ಕುಳ್ಳಂಜೆ | ಮೊಳಹಳ್ಳಿ |
| | | ಹಾಲಾಡಿ-76 | ಹೊಂಬಾಡಿ-ಮಂಡಾಡಿ |
| | | ಕಕ್ಕುಂಜೆ | ಹೆಸ್ಕತ್ತೂರು |
| | | ಬಿಲ್ಲಾಡಿ | ಕೊರ್ಗಿ |
| | | ಹಾಲಾಡಿ-28 | ಕೆದೂರು |
| | | ಹಾರ್ದಳ್ಳಿ-ಮಂಡಳ್ಳಿ | ಬೇಳೂರು |
| | | ಯಡ್ಯಾಡಿ-ಮತ್ಯಾಡಿ | ಜಪ್ತಿ |
| | | ಹಳ್ನಾಡಿ-ಹರ್ಕಾಡಿ | ಕಾಳಾವರ |
| | | ವಂಡಾರು | ಆಸೋಡು |
| | | ಶಿರಿಯಾರ | ಕಂದಾವರ |
| | | | ವಕ್ವಾಡಿ |
| | | | ಕೋಣಿ |
| | | | ಕೋಟೇಶ್ವರ್ |
| | | | ಗೋಪಾಡಿ |
| | | | ಕುಂಭಾಶಿ |
| | | | ತೆಕ್ಕಟ್ಟೆ |
| | | | ಬಸ್ರೂರು |
| | | | ಬಳ್ಕೂರು |
| | | | ಆನಗಳ್ಳಿ |
| 2. | ವಾರಾಹಿ ಬಲದಂಡೆ ಕಾಲುವೆ | ಸಿದ್ಧಾಪುರ | ಶಂಕರನಾರಾಯಣ |
| | | ಉಳ್ಳೂರು-74 | ಅಂಪಾರು |
| | | ಶಂಕರನಾರಾಯಣ | ಹಳ್ನಾಡು |
| | | ಕುಳ್ಳಂಜೆ | ಕಾವ್ರಾಡಿ |

| | | | |
|---|---|---|---|
| 3 | ವಾರಾಹಿ ಏತ ಕಾಲುವೆ ಕಾಮಗಾರಿ | | 28-ಹಾಲಾಡಿ |
| | | | ಆವರ್ಸೆ |
| | | | ವಂಡಾರು |
| | | | ಶಿರಿಯಾರ ಮತ್ತು ಶಿರಿಯಾರ-21 |
| | | | ಹೆಗ್ಗುಂಜೆ |
| | | | ಬಿಲ್ಲಾಡಿ |
| | | | ಯಡ್ತಾಡಿ ಮತ್ತು ಯಡ್ತಾಡಿ-22 |
| | | | ಕಾವಾಡಿ-18 |
| | | | ಅಚ್ಲಾಡಿ-20 |
| | | | ಶಿರೂರು |
| | | | ಕಾಡೂರು |
| | | | ನಾಡೂರು |

ಜಸಂಇ 31 ಎಂಎಲ್ಎ 2018

*****